


International Journal of Kannada Research
www.kannadajournal.com

ISSN: 2454–5813
IJKR 2018; 4(2): 31-33
© 2018 IJKR
www.kannadajournal.com
Received: 15-02-2018
Accepted: 18-03-2018

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

# ಮದ್ದೂರು ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು–ಒಂದು ಅವಲೋಕನ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2018.v4.i2a.851

**ಪೀಠಿಕೆ**

ಇಪ್ಪತ್ತನೆಯ ಶತಮಾನದಲ್ಲಿರುವ ನಾವು ಶಾಸನಗಳ ಸಹಾಯದಿಂದ ಒಂದು ಪ್ರದೇಶದ ದೇವಾಲಯಗಳನ್ನು ಕಲ್ಪಿಸಿಕೊಂಡಾಗ ಈಗಿನ ಚಿತ್ರಕ್ಕಿಂತ ಬಹು ಭಿನ್ನವಾದ ಚಿತ್ರವೊಂದು ಮೂಡುತ್ತದೆ. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕಗಳು, ದೇವರ ಕೃಪೆಗೆ ಪಾತ್ರವಾಗುವ ತಾಣ ಈ ಭಕ್ತಿ ಮತ್ತು ನಿಷ್ಠೆಗಳು ನೆಲೆಗೊಂಡಿದ್ದ ಹಲವರ ಹೆಸರುಗಳು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆಯಾ ಕಾಲದ ಶಾಸನಗಳಲ್ಲಿ ದೇವಾಲಯ, ಕೆರೆ, ಮಂಟಪ ಇತ್ಯಾದಿ ವಾಸ್ತುಗಳಿಗೆ ನೀಡಿದ ದಾನಗಳ ಬಗ್ಗೆ ಉಲ್ಲೇಖಗಳಿವೆ. ದಕ್ಷಿಣ ಭಾರತದ ಆರಂಭದ ರಾಜಮನೆತನಗಳಲ್ಲಿ ಪ್ರಮುಖವಾದ ಗಂಗ, ಚೋಳರ ಅಧಿಪತ್ಯಕ್ಕೆ ಈ ತಾಲ್ಲೂಕು ಒಳಗಾಗಿದ್ದು ಆ ಕಾಲದಿಂದಲೇ ಇಲ್ಲಿ ಹಲವಾರು ದೇವಾಲಯ, ವಾಸ್ತು, ಶಿಲ್ಪಗಳ ಹೆಸರುಗಳು ದೊರೆಯುತ್ತವೆ. ಕ್ರಿ.ಶ. 796ರ ಗಂಜಾಂ ಶಾಸನದಲ್ಲಿ ಗಂಗರ 2ನೇ ಶಿವಮಾರನ ಮಗ ಎರೆಯಪ್ಪ ಅರ್ಪೋಳೆ ಗ್ರಾಮದ ಪೊನ್ನಾದಿಗೆ ತಿಪ್ಪರೂರು ಗ್ರಾಮವನ್ನು ಬ್ರಹ್ಮಾದೇಯವಾಗಿ ನೀಡಿದ ಉಲ್ಲೇಖವಿದ್ದು ಅಲ್ಲಿ ಚಿಕ್ಕ ಪ್ರಮಾಣದಲ್ಲಿಯಾದರೂ ದೇವಾಲಯವೊಂದು ಇದ್ದಿರಬಹುದಾದ ಸಂಭವವಿದೆ.

ದೇವಾಲಯ ರಚನೆಯೊಂದರ ಇನ್ನೊಂದು ಉಲ್ಲೇಖ ದೊರೆಯುವುದು ಮದ್ದೂರು ತಾಲ್ಲೂಕಿನ ತೈಲೂರಿನ ನೊಳಂಬ ಮಹೇಂದ್ರನ ಶಾಸನದಲ್ಲಿ

1. ಸ್ವಸ್ತಿ ಸಕನೃಪಕಾ
2. ಲಾತೀತಸಮ್ವತ್ಸರಙ್ಗ
3. ಳೆಣ್ಟುನೂಱಪದಿನೇೞನೆ
4. ಯ ವರಿಷ ಪ್ರವರ್ತ್ತಿಸೆ
5. ನೊವಿಮ್ಬಧಿರಾಜಪೃಥು
6. ವೀರಾಜ್ಯಂಗೆಯೆ ತೈರೂರು
7. ಕೌಣ್ಡಿಲ್ಯಗೋತ್ರದ ಗಾಮು
8. ಣ್ಡ ಸಾಮಿಗಳ ಮಗನ್ನಾ
9. ಗಮ್ಮಯ್ಯ ಕಲ್ಲದೇಗು
10. ಲಮಮ್ಮಾಡಿಸಿ ಪಡಿ[1]

ಈ ಶಾಸನೋಕ್ತ ತೈರೂರು ಈಗಿನ ತಾಯಲೂರು ಗ್ರಾಮವಾಗಿದ್ದು, ಕೆರೆಯ ಉತ್ತರ ಕೋಡಿಯ ಬಳಿ ನಿಂತಿರುವ ಕಂಬದಲ್ಲಿ ಶಾಸನವನ್ನು ಕಾಣಬಹುದು. ಕ್ರಿ.ಶ. 895–96 ರಲ್ಲಿ (ಗಾವುಂಡಸ್ವಾಮಿ) ಗಾಮುಣ್ಡಸ್ವಾಮಿಯ ಮಗ ನಾಗಮಯ್ಯ ಶಿಲಾಮಯವಾದ ದೇವಾಲಯವೊಂದನ್ನು ಕಟ್ಟಿಸಿದುದನ್ನು, ಗಂಗರ ಎರಡನೇ ರಾಚಮಲ್ಲ ದಾನ ನೀಡಿದ ಎಂಬ ಮಾಹಿತಿಯನ್ನು ಉಲ್ಲೇಖಿಸಿದೆ.

ರಾಷ್ಟ್ರಕೂಟ ಮೂರನೇ ಕೃಷ್ಣ ಚೋಳರ ವಿರುದ್ಧ ಶೌರ್ಯದಿಂದ ಹೋರಾಡಿ 'ಕಾಳಿ' ಎಂಬ ಹೆಸರಿನ ಬೇಟೆ ನಾಯಿಯೊಂದನ್ನು ಬೇಡಿ ಪಡೆದ ಸಂಗತಿಯನ್ನು ಕ್ರಿ.ಶ. 950 ರ ಪ್ರಸಿದ್ಧವಾದ ಆತಕೂರಿನ

ಶಾಸನದಲ್ಲಿ ಅಲ್ಲಿಯ ಚಲ್ಲೇಶ್ವರ ದೇವಾಲಯದ ಬಗ್ಗೆ ಉಲ್ಲೇಖವಿದೆ. ಈಗ ಕನ್ನಂಬಾಡಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಕಣ್ಣೇಶ್ವರ ದೇವಾಲಯದಲ್ಲಿ ರಾಷ್ಟ್ರಕೂಟರ ಕಾಲದ ಶಾಸನವೊಂದು ಇದೆಯೆಂಬ ಆಧಾರದ ಈ ದೇವಾಲಯವೂ ಮೂಲತಃ ರಾಷ್ಟ್ರಕೂಟರದೆಂಬ ಅಭಿಪ್ರಾಯವೂ ಇದೆ. ರಾಷ್ಟ್ರಕೂಟರ ಕರ್ಕನಿಗೆ (ಬಲ್ಲಪ) ಸಂಬಂಧಿಸಿದ ಕ್ರಿ.ಶ. 986–87 ರ ಶಾಸನವೊಂದು ಕಾಡಕೊತ್ತನಹಳ್ಳಿ ಈಶ್ವರ ದೇವಾಲಯದ ಬಳಿಯಿದೆ.

ಸ್ವಸ್ತಿ ಶ್ರೀ ಸಖನೃಪಕಾಲಾತೀ
ತ ಸಂವತ್ಸರಂಗ 908 ನೆಯ ವರ್ಷದ ವ್ಯ[2]

ಈ ರೀತಿಯಾಗಿ ಪ್ರಾರಂಭವಾಗುವ ಶಾಸನದ ಸಾಲುಗಳು ಗೋಯರ ಎಂಬಾತ ಆಳುತ್ತಿದ್ದಾಗ ಬಲ್ಲಪನು ಗಂಗವಾಡಿಗೆ ಭೇಟಿ ನೀಡಿದ ವಿಷಯವನ್ನು ಅದು ತಿಳಿಸುತ್ತದೆ. ಶಾಸನದ ಕಾಲವಾದ ಶಕವರ್ಷ 908 ನೆಯ ವ್ಯಯಸಂವತ್ಸರಕ್ಕೆ ಸಮನಾದ ಕ್ರಿ.ಶ. 986–87 ರ ಸಮಯಕ್ಕೆ ಮೊದಲೇ ದೇವಾಲಯಗಳ ರಚನೆಯಾಗಿದೆ ಎಂಬುದಕ್ಕೆ ಪಕ್ಕದಲ್ಲಿರುವ ಈಶ್ವರ ದೇವಾಲಯವೇ ಸಾಕ್ಷಿ.

ಮಂಡ್ಯ ಜಿಲ್ಲೆಯು ಕೆಲಕಾಲ ಚೋಳರ ಆಶ್ರಯದಲ್ಲಿದ್ದು, ಮದ್ದೂರು ತಾಲ್ಲೂಕು ಕೂಡ ಅವರ ಆಳ್ವಿಕೆಗೆ ಒಳಗಾಗಿದೆ. ಚೋಳರ ಶಾಸನಗಳು ಸಾಮಾನ್ಯವಾಗಿ ರಾಜರ ಪ್ರಶಸ್ತಿ ಪರಾಕ್ರಮಗಳನ್ನು ವಿಜಯಗಳನ್ನು, ಅವರ ದಾನಧರ್ಮಗಳನ್ನು, ಕಟ್ಟಿಸಿದ ದೇವಾಲಯಗಳನ್ನು ಕುರಿತು ವಿವರವಾಗಿ ತಿಳಿಸುತ್ತವೆ. ಒಂದನೇ ರಾಜೇಂದ್ರನು ಹಲವಾರು ದೇವಾಲಯಗಳಿಗೆ ದಾನ ನೀಡಿದ ಉಲ್ಲೇಖಗಳಿದ್ದು ಈ ದೇವಾಲಯಗಳು ಅದಕ್ಕೂ ಮುಂಚಿನ ರಚನೆಯಾಗಿವೆ. ಕೊಪ್ಪ ಮದ್ದೂರು ತಾಲ್ಲೂಕಿನ ಹೋಬಳಿ ಗ್ರಾಮವಾಗಿದೆ. ಈ ಗ್ರಾಮದ ಇತಿಹಾಸವನ್ನು ಹೊಯ್ಸಳರ ಕಾಲದಿಂದಲೂ ಕಾಣಬಹುದು. ಹೊಯ್ಸಳ ದೇವ ಬಸದಿಗೋಸ್ಕರ ಒಂದು ಕೆರೆಯನ್ನು ದತ್ತಿ ಬಿಟ್ಟಿರುವುದಾಗಿ ತಿಳಿದುಬರುತ್ತದೆ. ಕ್ರಿ.ಶ. 1068 ಕ್ಕೆ ಸೇರಿದ ಶಾಸನವೊಂದು ಕೊಪ್ಪ ಗ್ರಾಮದಲ್ಲಿ ಉತ್ತರಕ್ಕೆ ಮಾಸ್ತಮ್ಮನ ಗುಡಿಯ ಬಾಗಿಲ ಚೌಕಟ್ಟಿನ ಕಲ್ಲಿನಲ್ಲಿದೆ.

ಅಬಲವಾಡಿಯಲ್ಲಿ ಕ್ರಿ.ಶ. 1131 ರ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಶಾಸನವೊಂದು ದೊರೆಯುತ್ತದೆ.

ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ
ಜೀಯಾತ್ತ್ರೈಳೋ
ಕ್ಯನಾಥಸ್ಯಶಾಸನಂ ಜಿನಶಾಸನಂ ॥ ಸ್ವಸ್ತಿ ಸಮಧಿಗತ
ಪಞ್ಚಮಹಾ[3]

ಕೊಪ್ಪದ ಬಳಿಯ ಎರಡು ಮೂರು ಕಿ.ಮೀ.ಗಳ ಅಂತರದಲ್ಲಿ ಆಬಲವಾಡಿ ಕಂಡುಬರುತ್ತದೆ. ತಿಪ್ಪೂರಿನಂತೆ ಇದೂ ಕೂಡ ಒಂದು ಪ್ರಮುಖ ಜೈನ ಕೇಂದ್ರವಾಗಿದ್ದಿರಬಹುದು. ಹೆಗ್ಗಡೆ ಮಲ್ಲಿನಾಥನು ಜೈನಬಸದಿಯನ್ನು ಕಟ್ಟಿಸಿ ದತ್ತಿ ಬಿಟ್ಟಿರುವ ವಿಷಯ ಪ್ರಸ್ತಾಪಿಸಲಾಗಿದೆ. 12ನೇ ಶತಮಾನದ ಮೊದಲಲ್ಲಿ ಹೊಯ್ಸಳ ನರಸಿಂಹನ ಕಾಲದಲ್ಲಿ ಕೆಲವು ದೇವಾಲಯಗಳ ರಚನೆಗಳಾದವು.

ವಿಜಯನಗರ ಕಾಲದಲ್ಲಿ ಹೊಸದಾಗಿ ದೇವಾಲಯಗಳ ನಿರ್ಮಾಣಕ್ಕಿಂತ ಹಳೆಯದರ ಜೀರ್ಣೋದ್ಧಾರ ಇಲ್ಲವೆ ವಿಸ್ತರಿಸುವಿಕೆಯನ್ನು ಕಾಣಬಹುದು. ಗಂಗ–ಹೊಯ್ಸಳರಲ್ಲದೆ ವಿಜಯನಗರದ ಅರಸರೂ, ಜೈನಧರ್ಮಕ್ಕೆ ಪ್ರೋತ್ಸಾಹಿಸಿದ್ದು ತಾಲೂಕಿನ ಅರೆತಿಪ್ಪೂರಿನಲ್ಲಿ ಜಿನಾಲಯವನ್ನು ಕಾಣಬಹುದು. ಶಾಸನಗಳಲ್ಲಿ ಈ ಊರಿಗೆ 'ತಿಪ್ಪೆಯೂರು' 'ಬಸ್ತಿಯ ತಿಪ್ಪೂರು' ಎಂದು ಉಲ್ಲೇಖವಿದೆ. ಸುಮಾರು ಕ್ರಿ.ಶ. 916 ರಲ್ಲಿ ಬಸದಿಯೊಂದು ನಿರ್ಮಾಣಗೊಂಡಂತೆ ತಿಳಿದುಬರುತ್ತದೆ.[4] ಈ ಊರು ಗಂಗರ ಕಾಲದಿಂದಲೂ ಜೈನ ಕ್ಷೇತ್ರವಾಗಿ ಬೆಳದು ಬಂದಿದೆ. ಚಾರಿತ್ರಿಕವಾಗಿ ಜೈನ ಕೇಂದ್ರವಾಗಿ ಬೆಳೆದು ಬಂದ ಈ ಊರಿನಲ್ಲಿ ಒಂದು ಕಾಲಕ್ಕೆ ಜೈನ ಕೇಂದ್ರಬಿಂದುವಾಗಿ ಮೆರೆದ ಕುರುಹು ಸಾಕಷ್ಟು ಇದೆ. ಇಲ್ಲಿ ದೊರೆಯುವ ಸ್ಮಾರಕಗಳು, ಅವಶೇಷಗಳಿಂದಾಗಿ ಈ ಸ್ಥಳ ಶ್ರವಣಬೆಳಗೊಳಕ್ಕೆ ಸಮನಾದ ಒಂದು ಜೈನ ಕ್ಷೇತ್ರವೂ ಆಗಿತ್ತೆಂದು ತಿಳಿದುಬರುತ್ತದೆ. ಬಳಿಯ ಕನಕಗಿರಿಯಲ್ಲಿರುವ ಬಸದಿಗಳು, ಜಿನ ವಿಗ್ರಹಗಳು ಸಾಕಷ್ಟು ದೊರೆಯುತ್ತವೆ. ಗಂಗರ ಕಾಲದ ಹತ್ತು ಅಡಿ ಎತ್ತರದ ಗೊಮ್ಮಟನ ವಿಗ್ರಹ, ಶ್ರವಣಬೆಳಗೊಳದ ಪ್ರಸಿದ್ಧ ಗೊಮ್ಮಟನ ವಿಗ್ರಹಕ್ಕಿಂತ ಪ್ರಾಚೀನವಾದುದೆನ್ನಲಾಗಿದೆ.

ಚೋಳರ ಶಾಸನಗಳು ಸಾಮಾನ್ಯವಾಗಿ ರಾಜರ ಪ್ರಶಸ್ತಿ, ಪರಾಕ್ರಮಗಳನ್ನು, ವಿಜಯಗಳನ್ನು ಅವರ ದಾನಧರ್ಮಗಳನ್ನು ಕಟ್ಟಿಸಿದ ದೇವಾಲಯಗಳನ್ನು ಕುರಿತು ವಿವರವಾಗಿ ತಿಳಿಸುತ್ತವೆ. ವೈದ್ಯನಾಥಪುರದ ವೈದ್ಯನಾಥೇಶ್ವರ ದೇವಸ್ಥಾನದ ಪ್ರಾಕಾರದಲ್ಲಿರುವ ಸೂರ್ಯನಾರಾಯಣ ದೇವರ ಗುಡಿಯ ಬಾಗಿಲ ಎಡಗಡೆ ಗೋಡೆಗೆ ಸೇರಿಸಿರುವ ತುಂಡುಕಲ್ಲಿನ ಮೇಲಿರುವ ತೃಟಿತ ಶಾಸನವು ಒಂದನೆಯ ರಾಜೇಂದ್ರ ಚೋಳನ ಕಾಲಕ್ಕೆ ಸೇರಿದ್ದು, ಆ ಪ್ರಶಸ್ತಿಗಳನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1279 ರ ತಮಿಳು ಶಾಸನವು ನರಸಿಂಹ ಚತುರ್ವೇದಿಮಂಗಲವಾದ ಮಱುದೂರಿನ ವೈದ್ಯನಾಥದೇವರ ನಂದಾದೀಪಕ್ಕಾಗಿ ದೇವದಾನದಲ್ಲಿ 'ನಿಮಂದ ಕಾಣಿಕ್ಕೈ' ಆಗಿ ದತ್ತಿ ಬಿಟ್ಟಿದನ್ನು ತಿಳಿಸುತ್ತದೆ.

ಶ್ರೀ ವೈದ್ಯನಾಥದ ಮುಡೈಯಾರ್
ದೇವದಾನತ್ತಿಲ್ ನಿಮನ್ದ ಕಾ
ಣಿಕ್ಕೈ ಇದ್ದೇವಱ್ಕು ತಿರುನನ್ದಾ
ವಿಳಕ್ಕು ಒನ್ರು ಚನ್ದಿರಾದಿತ್ತ
ಏರೈ ಚೆಲ್ಲಕ್ಕಡವದಾಗಿವುಮ್[5]

ನಿಮಂದ ಅಥವಾ ನಿಬಂಧ ಎಂದರೆ ದೇವಾಲಯದ ಕೆಲಸಕಾರ್ಯಗಳು ನಿಗದಿಗೊಳಿಸಿದಂತೆ ನಡೆಯುವ ಏರ್ಪಾಡು. ಇಲ್ಲಿ ದೇವಾಲಯಕ್ಕೆ ಬಿಟ್ಟ ದೇವದಾನದ ಸ್ವಲ್ಪ ಭಾಗವನ್ನು ಒಂದು ಗೊತ್ತಾದ ಉದ್ದೇಶಕ್ಕಾಗಿ ಎಂದರೆ ನಂದಾದೀಪವನ್ನು ಉರಿಸುವುದಕ್ಕಾಗಿ ಕಾಣಿಕೆಯಾಗಿ ತೆಗೆದಿಡಲಾಗಿದೆ. ಈ ಏರ್ಪಾಡು ಮಾಡಿದವನು ರಾಜನ ಶ್ರೀಕರಣನಾಗಿದ್ದ ಸರ್ವಾಧಿಕಾರಿ ಮಹಾಪಸಾಯಿತ ತಿರುವಿಂದಳೂರಿನ ಪ್ರಯಾಗಗೈಪ್ಪೆರುಮಾಳ್ ದಂಡನಾಯಕ. ಆತನು ತಮಿಳು ಪ್ರಾಂತದಿಂದ ಬಂದ ಅಧಿಕಾರಿ ಎಂಬುದು ಸ್ಪಷ್ಟ.

ವೈದ್ಯನಾಥಪುರದ ಕ್ರಿ.ಶ. 1261 ರ ಶಾಸನದಲ್ಲಿ ಸೋಮೆಯದಂಡನಾಯಕನ ಅಳಿಯ ಕೇತಚಮೂಪತಿ (ಕೇತೆಯ ದಂಡನಾಯಕ) ದಾನಿಯಾಗಿ ಕಾಣಿಸಿಕೊಂಡಿದ್ದಾನೆ. ಅವನು ಕೆಳಲೆನಾಡಿನಲ್ಲಿರುವ ಮದ್ದೂರಿನ ವೈದ್ಯನಾಥ ದೇವರಿಗೆ ಬೇಡರಹಳ್ಳಿಯನ್ನು ದತ್ತಿ ಬಿಟ್ಟಿದ್ದಾನೆ. ಮದ್ದೂರಿನ ಕ್ರಿ.ಶ. 1278 ರ ಶಾಸನದಲ್ಲಿ ಚಿಕ್ಕಕೇತಯ್ಯನು ಮೂಡರಾಜ್ಯದ ಕಡೆ ದಂಡೆತ್ತಿ ಬಿಜಯ ಮಾಡುತ್ತಿದ್ದಾಗ ನಾರಸಿಂಗಚತುರ್ವೇದಿಮಂಗಲವಾದ ಮದ್ದೂರಿನ ನರಸಿಂಹ ಮತ್ತು ಅಲ್ಲಾಳಪೆರುಮಾಳ ದೇವರುಗಳಿಗೆ ದತ್ತಿಯೊಂದನ್ನು ಬಿಟ್ಟಿದ್ದಾನೆ.

ಕ್ರಿಶ್ಚಿಯನ್ ಸಮುದಾಯ ಮೈಸೂರು ಅರಸರ ಕಾಲದಿಂದಲೇ ಇಲ್ಲಿ ಕಂಡುಬರುತ್ತವೆ. ಅಂದಿನ ರಾಜ್ಯದ ಪ್ರದೇಶದಲ್ಲಿ 1686 ರಲ್ಲಿ ಮೈಸೂರು ಯುದ್ಧದಲ್ಲಿ 20 ಕ್ರೈಸ್ತ ದೇವಾಲಯಗಳು ನಾಶವಾದುವೆಂದೂ ತಿಳಿದುಬರುತ್ತದೆ. 1690 ರ ವೇಳೆಗೆ ಜಿಲ್ಲೆಯಲ್ಲಿ ಏಳು ಚರ್ಚುಗಳು ಉಳಿದಿದ್ದವು. ಟಿಪ್ಪು ಬ್ರಿಟಿಷರ

ವಿರುದ್ಧವಿದ್ದುದರಿಂದ ಕಿರಂಗೂರಿನ ಚರ್ಚ್ ಅಲ್ಲದೆ ಹಲವಾರು ಚರ್ಚ್‌ಗಳನ್ನು ನಾಶಗೊಳಿಸಿದ್ದನಾದರೂ ಫ್ರೆಂಚ್ ಮೂಲದ ಕ್ರೈಸ್ತರು ತಮ್ಮ ಆಲಯಗಳನ್ನು ರಚಿಸಿಕೊಂಡಿದ್ದರು. ಪಾದ್ರಿ ಅಬ್ಬೆದುಬಾಯಿ 1792 ರಲ್ಲಿ ಭಾರತಕ್ಕೆ ಬಂದು ಶ್ರೀರಂಗಪಟ್ಟಣದಲ್ಲಿ ನೆಲೆಸಿ ಚರ್ಚೊಂದನ್ನು ಕಟ್ಟಿದ್ದು ಇಂದಿಗೂ ಸುಸ್ಥಿತಿಯಲ್ಲಿ ಉಳಿದು ಬಂದಿದೆ. ಇದಲ್ಲದೆ ಮಂಡ್ಯ, ಮದ್ದೂರು, ಮಳವಳ್ಳಿ, ಚಿಕ್ಕರಸಿನಕೆರೆ ಇತ್ಯಾದಿ ಕಡೆಗಳಲ್ಲು ಕ್ಯಾಥೋಲಿಕ್ ಪಂಗಡದ ಚರ್ಚ್‌ಗಳನ್ನು ಕಾಣಬಹುದು. ಹೊಯ್ಸಳ ವಿಷ್ಣುವರ್ಧನನ ಕಾಲದ ಕ್ರಿ.ಶ. 1132 ರ ಶಾಸನವೊಂದು ಹಿಂದೆ ಶಿವಮಾರಸಿಂಹ ಎಂಬ ಹೆಸರಿನ ಗಂಗ ಅರಸನೊಬ್ಬ ಕಳಲೆನಾಡಿಗೆ ಸೇರಿದ ಹಲಗೂರು ಗ್ರಾಮವನ್ನು ಮದ್ದೂರಿನ ವೈದ್ಯನಾಥೇಶ್ವರ ದಾನ ನೀಡಲಾಗಿದೆ ಎಂಬುದನ್ನು ತಿಳಿಸುತ್ತದೆ. ಈ ದೇವಾಲಯದ ರಂಗಮಂಟಪದಲ್ಲಿ ದಕ್ಷಿಣಕ್ಕೆ ನಿಲ್ಲಿಸಿರುವ ಒಂದನೆಯ ಕಲ್ಲು.

> ನಮಸ್ತುಂಗಶಿರಶ್ಚುಂಬಿಚಂದ್ರಚಾ
> ಮರಚಾರವೇ । ತ್ರೈಲೋಕ್ಯನಗರಾರಂಭಮೂಲಸ್ತಂಬಾ[6]

ಈ ಶಾಸನದಲ್ಲಿ ಮದ್ದೂರನ್ನು ಶಿವಪುರ ಎಂದು ಕರೆದಿರುವುದು ಕುತೂಹಲಕರ ಸಂಗತಿ. ಶಿವಬ್ರಾಹ್ಮಣನಾದ ಪರದೇಶಿಯ ಮಗ ಪಿಳ್ಳೈಯಾಂಡಾರ್ ದಾನವನ್ನು ಸ್ವೀಕರಿಸಿದಾತ. ಹಲಗೂರಿನಲ್ಲಿ ಕೆರೆಯ ಕೆಳಭಾಗದ ಪ್ರದೇಶವನ್ನು ಪಂಡಿತೋಜನಿಗೆ ದಾನ ಮಾಡಲಾಗಿದೆ. ಈ ಪಂಡಿತೋಜ ಶಾಸನವನ್ನು ಕೆತ್ತನೆ ಮಾಡಿಸಿರಬಹುದು.

ರಾಂಪುರದ ರಾಮೇಶ್ವರ ದೇವಾಲಯದಲ್ಲಿ ದೊರಕಿರುವ ಶಾಸನವು ಕ್ರಿ.ಶ. 1459 ರ ವಿಜಯನಗರದ ಮಲ್ಲಿಕಾರ್ಜುನನ ಕಾಲಕ್ಕೆ ಸೇರಿದೆ.

> ಶ್ರೀ ಗಣಾಧಿಪತಯೇಂ ನಂಃ ॥ ನಮಸ್ತುಂಗಸಿರಶ್ಚುಂ
> ಬಿಚಂದ್ರಚಾಮರಚಾರನೇ । ತ್ರಯಿಲೋಕ್ಯನಗರಾರಂಭ
> ಮೂಲಸ್ತಂಭಾ[7]

ಇದೇ ರೀತಿಯ ಮತ್ತೊಂದು ಶಾಸನವು ದಣ್ಣಾಯಕನಪುರದಲ್ಲಿ ದೊರಕಿದೆ. ಮದ್ದೂರು ಸ್ಥಳದ ಕಳಲೆನಾಡಿನ ಬಸವಾಪಟ್ಟಣವನ್ನು ಲಕ್ಕಪ್ಪನ ಮಗ ತಿಪ್ಪಯ್ಯನು ಮಹಾಪ್ರಧಾನ ತಿಮ್ಮಣ್ಣದಣ್ಣಾಯಕರ ಒಪ್ಪಿಗೆಯಿಂದ ಬೆಳತೂರಿನ ರಾಮದೇವರಿಗೆ ದತ್ತಿ ಬಿಟ್ಟುದನ್ನು ತಿಳಿಸುತ್ತದೆ.

ಈವರೆಗೆ ಉಲ್ಲೇಖಿಸಲಾದ, ನಮಗೆ ಲಭ್ಯವಿರುವ ಶಾಸನಗಳಿಂದ ತಿಳಿದುಬರುವಂತೆ ಮದ್ದೂರು ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಲ್ಲಿಯೇ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಈವರೆಗೆ ಪ್ರಕಟವಾಗದಿರುವ ಮತ್ತು ಶಾಸನತಜ್ಞರ ಗಮನಕ್ಕೂ ಬಾರದಿರುವ ಇನ್ನೂ ಅನೇಕ ಶಾಸನಗಳಿರುವುದು ಅಸಂಭವವಲ್ಲ. ಅವುಗಳಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದ ಕೆಲವು ಶಾಸನಗಳು ದೊರೆಯಬಹುದು. ಶಾಸನಸ್ಥ ದಾಖಲೆಗಳು ಇಲ್ಲದೆ ಇರುವ ಸಾಧ್ಯತೆಗಳೂ ಇವೆ. ಸಾಮಂತರು, ಮಾಂಡಳಿಕರು, ಪ್ರದಾನಿಗಳು, ದಂಡನಾಯಕರು ಮತ್ತಿತರ ಅಧಿಕಾರಿ ವರ್ಗದವರು ತಮ್ಮ ಸ್ಥಾನಬಲ ಅನುಭವ ಮತ್ತು ಅರ್ಥಬಲಗಳನ್ನು ಸದುಪಯೋಗಪಡಿಸಿಕೊಂಡು ದೇವಾಲಯಗಳ ನಿರ್ಮಾಣ ಮಾಡಿಸಿದ್ದಾರೆ. ಕೆಲವರು ಹಲವಾರು ದೇವಾಲಯಗಳನ್ನೂ, ಬೇರೆ ಬೇರೆ ಊರುಗಳಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡಿರುವುದು, ಹಲವರು ಒಟ್ಟಿಗೆ ಸೇರಿ ದೇವಾಲಯಗಳ ನಿರ್ಮಾಣ ಮಾಡಿರುವುದು ಕಾಣಬಹುದು. ಪ್ರಾಚೀನ ದೇವಾಲಯಗಳಲ್ಲಿ ಅರವಂಟಿಗೆ, ಶಾಲೆಗಳ ನಿರ್ಮಾಣವಾಗಿರುವುದು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಜನತೆ ಉತ್ಸಾಹ, ಶ್ರದ್ಧೆ ಮತ್ತು ನಿಷ್ಠೆಗಳಿಂದ ತಮ್ಮನ್ನು ತಾವು ತೊಡಗಿಸಿಕೊಂಡಿದ್ದುದಕ್ಕೆ ಸಮರ್ಥ ಸಾಕ್ಷಿಗಳಾಗಿವೆ.

ದೇವರು ಕನಸಿನಲ್ಲಿ ಕಾಣಿಸಿಕೊಂಡು ದೇವಾಲಯ ನಿರ್ಮಾಣಕ್ಕೆ ಪ್ರೇರಣೆ ನೀಡುತ್ತಾನೆಂಬ ಕಥೆಗಳನ್ನು ಕೇಳಿದ್ದೇವೆ; ಓದಿದ್ದೇವೆ. ಅನೇಕ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಕಾರ್ಯಗಳು ಇಂತಹ ಪ್ರೇರಣೆಗಳಿಂದಾಗಿಯೇ ಆಗಿರುವ ಸಾಧ್ಯತೆಗಳನ್ನು ಒಮ್ಮೆಗೆ ತಳ್ಳಿ ಹಾಕುವಂತಿಲ್ಲ. ಭೂಮಿಯಲ್ಲಿ ದೊರೆತ ಅಥವಾ ಉದ್ಭವ ಎಂದು ಪರಿಗಣಿತವಾದ ದೇವತಾಮೂರ್ತಿಗಳಿಗೆ ದೇವಾಲಯ ನಿರ್ಮಾಣ ಮಾಡುವ ಸಂಸ್ಕೃತಿ ಈಗಲೂ ಚಾಲನೆಯಲ್ಲಿದೆ. ದೇವಾಲಯಗಳ ಉಗಮಕ್ಕೆ ಈ ರೀತಿಯ ಕಾರಣಗಳು ಮೂಲವಾದರೂ, ತದನಂತರ ಜನ, ರಾಜರುಗಳ ಪೋಷಣೆಯಿಂದ ವಿಕಾಸ ಹೊಂದಿವೆ.

**ಕೊನೆ ಟಿಪ್ಪಣಿ**

1. ಮುಖ್ಯ ಸಂಪಾದಕರು– ಡಾ. ಬಾ.ರಾ.ಗೋಪಾಲ್, ಎಪಿಗ್ರಾಪಿಯ ಕರ್ನಾಟಿಕ, ಸಂಪುಟ–7, ಪುಟ – 285
2. ಅದೇ, ಪುಟ – 326
3. ಅದೇ, ಪುಟ – 269
4. ಡಾ.ಅರ್ಜುನಪುರಿ ಅಪ್ಪಾಜಿಗೌಡ, ಮದ್ದೂರು ತಾಲ್ಲೂಕು ದರ್ಶನ, ಪುಟ – 41
5. ಮುಖ್ಯ ಸಂಪಾದಕರು– ಡಾ. ಬಾ.ರಾ.ಗೋಪಾಲ್, ಎಪಿಗ್ರಾಪಿಯ ಕರ್ನಾಟಿಕ, ಸಂಪುಟ–7, ಪುಟ–298
6. ಅದೇ, ಪುಟ – 293
7. ಅದೇ, ಪುಟ – 267